O.S.No.10/2021

P.W.-1

**(ದಿನಾಂಕ 02.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಬಿ.ಕೆ.ಎಂ. ವಕೀಲರಿಂದಃ-**

ಗಣೇಶಪ್ಪ ಮತ್ತು ಈಶ್ವರಪ್ಪ ಅಣ್ಣ-ತಮ್ಮಂದಿರು ಎಂದರೆ ಸರಿ. ಅವರಿಗೆ ಅವರ ತಂದೆಯಿಂದ ಬಂದಂತಹ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಗಣೇಶಪ್ಪ ಮತ್ತು ಈಶ್ವರಪ್ಪನಿಗೆ ಯಾವುದೇ ತರಹದ ಪಿತ್ರಾರ್ಜಿತ ಆಸ್ತಿ ಇರುವುದಿಲ್ಲ ಎಂದು ಬರೆಸಿದ್ದೇನೆ ಎಂದರೆ ಇದೆ. ದಾವಾ ಆಸ್ತಿಗಳನ್ನು ಗಣೇಶಪ್ಪ ಮತ್ತು ಈಶ್ವರಪ್ಪ ಜಂಟಿಯಾಗಿ ಕಿರಾಣಿ ಅಂಗಡಿ ನಡೆಸುತ್ತಿದ್ದರು. ಯಾವ ದಾವಾದ ಆಸ್ತಿಯನ್ನು ಯಾವ ವರ್ಷದ ಸಾಲಿನಲ್ಲಿ ಖರೀದಿ ಮಾಡಿದ್ದರು ಎಂದರೆ 7 ಎಕರೆ ಆಸ್ತಿಯನ್ನು ಖರೀದಿ ಮಾಡಿದ್ದರು ನನಗೆ ನೆನಪಿಲ್ಲ. ಸರ್ವೆ ನಂಬರ್ ನೆನಪಿಲ್ಲ. ನಾನು ಸಾಕ್ಷಿ ಪ್ರಮಾಣಪತ್ರದಲ್ಲಿ ಗಣೇಶಪ್ಪ ಮತ್ತು ಈಶ್ವರಪ್ಪನಿಗೆ ಯಾವ ಮೂಲದಿಂದ ಆದಾಯ ಇತ್ತು ಅಂತಾ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ. ಗಣೇಶಪ್ಪ ಮತ್ತು ಈಶ್ವರಪ್ಪನಿಗೆ ಎಷ್ಟು ಆದಾಯ ಇತ್ತು ಎಂದರೆ ನಾನು ಹೇಳಿ ಬರೆಸಿದ್ದೇನೆ. ಗಣೇಶಪ್ಪ ಮತ್ತು ಈಶ್ವರಪ್ಪನಿಗೆ ಎಷ್ಟು ಆಧಾಯ ಇತ್ತು ಅಂತಾ ನಾನು ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿದಲ್ಲದಿದ್ದರೂ ಸಹಾ ಈಗ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾದ ಆಸ್ತಿಗಳು ಯಾವ್ಯಾವು ಗಣೇಶಪ್ಪ ಮತ್ತು ಈಶ್ವರಪ್ಪನಿಗೆ ಇದ್ದ ಜಂಟಿ ಆದಾಯದಿಂದ ಖರೀದಿ ಮಾಡಿದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಗಣೇಶಪ್ಪ ಮತ್ತು ಈಶ್ವರಪ್ಪ ಯಾವುದೇ ಆಸ್ತಿಗಳನ್ನು ಅವರ ಹೆಸರಿನಲ್ಲಿ ಖರೀದಿ ಮಾಡಿಲ್ಲ ಎಂದರೆ ಈಶ್ವರಪ್ಪನ ಹೆಸರಿನಲ್ಲಿ ಖರೀದಿಸಿರುತ್ತಾರೆ. ಸದರಿ ಖರೀದಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಯಾವುದೇ ಖರೀದಿ ಪತ್ರ ಹಾಜರುಪಡಿಸಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ಧೇನೆಂದರೆ ಸರಿಯಲ್ಲ. ಗಣೇಶಪ್ಪ ಮತ್ತು ಈಶ್ವರಪ್ಪ ಯಾವ ಉದ್ಯೋಗ

O.S.No.10/2021
P.W.-1

ಮಾಡುತ್ತಿದ್ದರು ಅಂತಾ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈಶ್ವರಪ್ಪ, ನಾಗರಾಜ, ರಾಮಚಂದ್ರಪ್ಪ ಮತ್ತು ಕಮಲಮ್ಮ ಮತ್ತು ದಿವಂಗತ ಅಣ್ಣಪ್ಪ ರವರಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡಲು ಯಾವುದೇ ಹಕ್ಕಿಲ್ಲ ಅಂತಾ ನಾನು ಬರೆಸಿರುವುದು ಸುಳ್ಳು ಇದೆ ಎಂದರೆ ನನಗೆ ಮಾರಾಟ ಮಾಡಿದ ವಿಚಾರ ಗೊತ್ತಿರಲಿಲ್ಲ. ಮನೆತನದ ನಿರ್ವಹಣೆಗಾಗಿ ಮತ್ತು ಲಗ್ನದ ಖರ್ಚು ತೀರಿಸುವ ಸಲುವಾಗ ದಾವಾದ ಆಸ್ತಿಗಳನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳನ್ನು ನಾನು ಮಾರ್ಕೆಟ್ ಬೆಲೆ ಕಡಿಮೆ ತೋರಿಸಿ ಕಡಿಮೆ ಶುಲ್ಕ ಪಾವತಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ:

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)**

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.